**ಪಿಡಬ್ಲೂ-1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 14-09-2023**

**ಮುಖ್ಯ ವಿಚಾರಣೆಃ ಶ್ರೀ ಎಸ್ ಎನ್ ವಿ ವಾದಿ ಪರ ವಕೀಲರಿಂದ**

ಈ ದಾವೆಯಲ್ಲಿ ನಾನು ವಾದಿಯಾಗಿದ್ದು ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಹಾಜರುಪಡಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ವಿಷಯಗಳು ನಾನೇ ಹೇಳಿ ಬರೆಸಿದ್ದು ಅವು ಸತ್ಯವಾಗಿದೆ.

1. ನಮ್ಮ ಕುಟುಂಬದ ವಂಶವೃಕ್ಷ ಪ್ರಮಾಣ ಪತ್ರದ ನೋಟರೈಸ್ಡ್ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

2. ದೇವನಹಳ್ಳಿ ತಾಲ್ಲೂಕು, ಉದುಗುರ್ಕಿ ಗ್ರಾಮದ ಸರ್ವೆ ನಂ. 13/3 ರ 1973 ರಿಂದ 1997 ನೇ ಸಾಲಿನವರೆಗಿನ ಒಟ್ಟು ಮೂರು ಕೈಬರಹ ಪಹಣಿ ಪತ್ರಿಕೆಗಳ ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-2 ರಿಂದ 4 ಎಂದು ಗುರುತಿಸಲಾಯಿತು.

3. ದೇವನಹಳ್ಳಿ ತಾಲ್ಲೂಕು, ಉದುಗುರ್ಕಿ ಗ್ರಾಮದ ಸರ್ವೆ ನಂ. 13/3 ರ 2002-03 ರಿಂದ 2020-21 ನೇ ಸಾಲಿನವರೆಗಿನ ಪಹಣಿ ಪತ್ರಿಕೆಗಳ ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಒಟ್ಟಾಗಿ ನಿಪಿ-5 ಎಂದು ಗುರುತಿಸಲಾಯಿತು.

4. ದೇವನಹಳ್ಳಿ ತಾಲ್ಲೂಕು, ಉದುಗುರ್ಕಿ ಗ್ರಾಮದ ಸರ್ವೆ ನಂ. 12/1 ರ 1973 ರಿಂದ 1997 ನೇ ಸಾಲಿನವರೆಗಿನ ಒಟ್ಟು ಮೂರು ಕೈಬರಹ ಪಹಣಿ ಪತ್ರಿಕೆಗಳ ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-6 ರಿಂದ 8 ಎಂದು ಗುರುತಿಸಲಾಯಿತು.

5. ದೇವನಹಳ್ಳಿ ತಾಲ್ಲೂಕು, ಉದುಗುರ್ಕಿ ಗ್ರಾಮದ ಸರ್ವೆ ನಂ. 12/1 ರ 2002-03 ರಿಂದ 2020-21 ನೇ ಸಾಲಿನವರೆಗಿನ ಪಹಣಿ ಪತ್ರಿಕೆಗಳ ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಒಟ್ಟಾಗಿ ನಿಪಿ-9 ಎಂದು ಗುರುತಿಸಲಾಯಿತು.

6. ಮ್ಯುಟೇಶನ್ ರಿಜಿಸ್ಟರ್ ನಂ. ಹೆಚ್ -20 2014- 15 ನೇ ಸಾಲಿನ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-10 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ 1 ಮತ್ತು 7 ನೇ ಪ್ರತಿವಾದಿಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ)

(2 ರಿಂದ 6 ನೇ ಪ್ರತಿವಾದಿಪರ ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು)

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸ. ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,
ದೇವನಹಳ್ಳಿ.